ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 307/2023

ಪ್ರಾಸಾ : 04

ಚಾಸಾ : 05

| | | |
|---|---|---|
| ಹೆಸರು | : | ಪುರಂದರ ಗೌಡ |
| ತಂದೆಯ ಹೆಸರು | : | ಪುಟ್ಟೆ ಗೌಡ |
| ಪ್ರಾಯ | : | 50 ವರ್ಷ |
| ಉದ್ಯೋಗ | : | ತರಕಾರಿ ವ್ಯಾಪಾರ |
| ವಾಸಸ್ಥಳ | : | ಅನಂತಾಡಿ ಗ್ರಾಮ, ಬಂಟ್ವಾಳ |

ದಿಃ 05/10/2024ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ನಿಪಿ-2 ಮತ್ತು 3 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಗಳನ್ನು ನಿಪಿ-2(ಬಿ) ಮತ್ತು ನಿಪಿ-3(ಬಿ) ಎಂದು ಗುರುತಿಸಲಾಯಿತು . ದಿ. 06.5.2022 ರಂದು ಬಂಟ್ವಾಳ ತಾಲೂಕು ನೆಟ್ಲ ಮುಡ್ನೂರು ಗ್ರಾಮದ ಕೊಡಾಜೆ ಎಂಬಲ್ಲಿ ಪೋಲಿಸರು ಬಂದಿದ್ದಾಗ ಚಾಸಾ-1 ರವರು ಹಾಜರಿದ್ದು ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಟೋಯಿಂಗ್ ಲಾರಿ ನಂಬ್ರ ಕೆಎ-14-ಬಿ-2579 ಸ್ವಾಧೀನ ಪಡಿಸಿಕೊಂಡು ಸಂಜೆ 4.00 ಗಂಟೆಯಿಂದ 4.30 ತನಕ ಮಹಜರು ಮತ್ತು ನಕ್ಷೆ ತಯಾರಿಸಿರುತ್ತಾರೆ . ಕೇಶವ ಮತ್ತು ಆನಂದ ಎಂಬುವವರು ಸಹ ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ . ನಿಪಿ-5 ರಿಂದ ನಿಪಿ-7 ರ ಪೋಟೋದಲ್ಲಿ ಕಾಣುವ ಟೋಯಿಂಗ್ ಲಾರಿಯನ್ನು ಸಾಕ್ಷಿ ನೋಡಿ ಗುರುತಿಸಿದರು .

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಮಯಾವಕಾಶ ಕೋರಿರುತ್ತಾರೆ . ಅಭಿಯೋಜಕರು ತಕರಾರು ಸಲ್ಲಿಸಿರುತ್ತಾರೆ. ವಾದ ವಿವಾದ ಆಲಿಸಲಾಯಿತು. ರೂ.150/- ಖರ್ಚು ಸಮೇತ ಪಾಟೀ ಸವಾಲನ್ನು ನ್ಯಾಯದ ಹಿತ ದೃಷ್ಟಿಯಿಂದ ಮುಂದೂಡಲಾಯಿತು .

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ